ಕಿಡಿಗೇಡಿಗಳು, ಅವರ ಅಂಗಡಿಯ ಜಗಲಿಯಲ್ಲಿದ್ದ ಉಪ್ಪಿನ ಮೂಟೆಗಳ ಸಮೇತ ಕಡಲಿಗೆ ಎಸೆದುಬಿಟ್ಟರೋ... ಅಂದೇ ರುಸ್ತುಂಸ್ವಾಬರು ಕಡಲಿಂದ ಈಜಿ ಮೇಲೆ ಬಂದವರು ಕುಟುಂಬ ಸಮೇತ ಗಟ್ಟವೇರಿ, ಮಕ್ಕಳನ್ನು ಇಲ್ಲಿಂದ ಶಾಲೆ ಬಿಡಿಸಿ ಅಲ್ಲಿನ ಶಾಲೆಗೆ ಸೇರಿಸಿದ್ದರು. ಅಲ್ಲಿಂದ ಸ್ವಪ್ನ–ವಾಹೀದ್ ಒಬ್ಬರನ್ನೊಬ್ಬರು ಸಂಪೂರ್ಣವಾಗಿ ಮರೆತೇಬಿಟ್ಟಿದ್ದರು.

ಹೀಗೆ ದೂರವಾದ ವಾಹೀದ್ ಮತ್ತು ಸ್ವಪ್ನ ಇಬ್ಬರೂ ಮತ್ತೆ ತಮ್ಮ ಪರಸ್ಪರ ಹಳೆಪರಿಚಯ, ಹಳೆ ನೆನಪುಗಳನ್ನು ತಮ್ಮೊಳಗೆ ಅವಾಹಿಸಿಕೊಂಡಿದ್ದು, ಈ ಸ್ವಪ್ನ ಹೆಗ್ಡೆ ದಾವಣಗೆರೆಯ ಮೆಡಿಕಲ್ ಕಾಲೇಜಿಗೆ ಸೇರಿದ ನಂತರದಲ್ಲಿ ಆ ವರ್ಷ ಅಬ್ದುಲ್ ವಾಹೀದ್ ಅದೇ ಕಾಲೇಜಿನ ಕಲ್ಚರಲ್ ಸೆಕ್ರೆಟರಿ. ಆ ಚಳಿಗಾಲದಲ್ಲಿ ನಡೆಯಲಿದ್ದ ಇಂಟರ್ ಯೂನಿವರ್ಸಿಟಿ ನೃತ್ಯಸ್ಪರ್ಧೆಗೆ ಭರತನಾಟ್ಯ ಪ್ರವೀಣೆ ಸ್ವಪ್ನ ಹೆಗ್ಡೆ ತನ್ನ ಹೆಸರನ್ನು ನೋಂದಾಯಿಸಲು ಕಾಲೇಜಿನ ಕಲ್ಚರಲ್ ಸೆಕ್ರೆಟರಿ ಬಳಿ ಬಂದಾಗಲಷ್ಟೇ ಆಕೆಗೆ ತಿಳಿದದ್ದು ಈತ ತನ್ನ ಬಾಲ್ಯದ ಪರಿಚಿತ ವಾಹೀದ್ ಎಂದು. ಯೋಗಾಯೋಗದಿಂದ ಮತ್ತೆ ಒಂದೆಡೆ ಸೇರಿ ಕಲಿಯುವ ಯೋಗ ಅವರಿಬ್ಬರಿಗೂ ಪ್ರಾಪ್ತಿಯಾದಾಗ, ಇಬ್ಬರಲ್ಲೂ ಬಾಲ್ಯದ ಇಗರ್ಜಿ ಶಾಲೆಯ ಹಳೆಯ ನೆನಪುಗಳು ಆಗಾಗ್ಗೆ ಗುದ್ದಾಡುತ್ತಿದ್ದಂತೆ... ಇಬ್ಬರೂ ಸಹಜವಾಗಿ ಹತ್ತಿರವಾಗಿದ್ದರೂ... ಆ 'ಹತ್ತಿರ'ದಲ್ಲೂ ಯಾವುದೋ ಒಂದು ಭಯದ ಅಂತರ ಅವರಿಬ್ಬರನ್ನೂ ಸದಾ ಕಾಯುತ್ತಲೇ ಇತ್ತು. ವೈದ್ಯ ಪದವಿ ಮುಗಿದೊಡನೆ ಕಾಲೇಜಿನ ಪ್ರತಿಭಾವಂತ ವಿದ್ಯಾರ್ಥಿ ವಾಹೀದ್ ಮುಂದೆ ಸೈಕಿಯಾಟ್ರಿಯಲ್ಲಿ ಎಂ.ಡಿ. ಮಾಡಲು ಬೆಂಗಳೂರಿಗೆ ತೆರಳಿದಾಗ... ಸ್ವಪ್ನ ಹನಿಗಣ್ಣಾಗಿದ್ದು ಖಂಡಿತ ಸುಳ್ಳಲ್ಲ. ಆಕೆಯ ಎದೆಯಲ್ಲಿನ ಅನುರಾಗದ ಕೋಗಿಲೆ ಹಲವು ಬಾರಿ ಹಾಡೆಬ್ಬಿಸಿದ್ದೂ ಸುಳ್ಳಲ್ಲ. ಆದರೆ ಸೂಕ್ಷ್ಮ ಮನಸ್ಸಿನ, ದೂರಾಲೋಚನೆಯುಳ್ಳ ಸಂವೇದನಾಶೀಲ ಯುವಕ ವಾಹೀದ್‌ನಿಗೆ ಧರ್ಮ ಸೂಕ್ಷ್ಮಗಳು ತಂದು ಹಾಕುವ ನೋವು ಸಾವಿನ ಬಗ್ಗೆ ಸ್ಪಷ್ಟ ಅರಿವಿದ್ದರಿಂದ ಆತ ತನ್ನ ಅಂತರಂಗದ ವ್ಯಾಪಾರವನ್ನು ವಾಸ್ತವದ ನೆಲೆಗಟ್ಟಿನಲ್ಲೇ ನಿಯಂತ್ರಿಸಲು ಸಫಲನಾಗಿ, ತನ್ನೊಳಗಿನ ಅನುರಾಗದ ಕೋಗಿಲೆಯ 'ಧ್ವನಿಪೆಟ್ಟಿಗೆ'ಯನ್ನೇ ತೆಪ್ಪಗೆ ಕಳಚಿ ಕೆಳಗಿರಿಸಿದ್ದ. ಸ್ವಪ್ನ ಹೆಗ್ಡೆಯ ಕಣ್ಣಳತೆಯಿಂದ ಡಾ. ವಾಹೀದ್ ದೂರವಾದ ನಂತರ, ಆಕೆ ಮಣಿಪಾಲದಲ್ಲೇ ಸೈಕಿಯಾಟ್ರಿಯಲ್ಲಿ ಪಿಜಿ ಮುಗಿಸಿದ ನಂತರದಲ್ಲಿ ಒಂದೆರಡು ವಸಂತಗಳು ಉರುಳುವಷ್ಟರಲ್ಲೆ ಆಕೆಯೊಳಗಿನ ಅನುರಾಗದ ಕೋಗಿಲೆಯು... ಬೆಂಗಳೂರಲ್ಲಿದ್ದ ಆಕೆಯ ಸೋದರಮಾವನ ಮಗ ಖ್ಯಾತ ಕ್ರಿಮಿನಲ್ ಲಾಯರ್ ವಿನಯ ಹೆಗ್ಡೆಯತ್ತ ತನ್ನ ಹಾಡನ್ನು ತೇಲಿಸಿಬಿಟ್ಟಿತ್ತು!

ಡಾ. ವಾಹೀದ್ ಮೈಸೂರಿಗೆ ಬಂದು ತನ್ನ ಕನಸಿನ 'ಬಾಲವನ' ಆಸ್ಪತ್ರೆಯನ್ನು ಆರಂಭಿಸುವಾಗ ಸ್ವಪ್ನ ಹೆಗ್ಡೆಯು ಆಗಷ್ಟೇ ತಾಯಿಯಾಗಿದ್ದಳು. ವಿನಯ ಹೆಗ್ಡೆಯನ್ನು ಮದುವೆಯಾಗಿ ಆಗ ಬರೀ ಹದಿನಾರು ತಿಂಗಳುಗಳಷ್ಟೇ ಕಳೆದಿದ್ದವು. ಡಾ. ವಾಹೀದ್ ಅವರು 'ಬಾಲವನ'ದ ಜತೆಗೆ ಬುದ್ಧಿಮಾಂದ್ಯ ಮಕ್ಕಳಿಗೆ ಶಾಲೆಯೊಂದನ್ನು ಆರಂಭಿಸುವಷ್ಟರಲ್ಲಿ ಸ್ವಪ್ನ ಹೆಗ್ಡೆ ಎರಡು ಮಕ್ಕಳ ತಾಯಿಯಾಗಿ ಇನ್ನಷ್ಟು ಜವಾಬ್ದಾರಿಯುಳ್ಳ 'ಅಮ್ಮ'ನಾಗಿ ಬಿಟ್ಟಿದ್ದಳು. ಆ ಹಂತದಲ್ಲಿ ಆಕೆಯಲ್ಲಿ ಜೀವನವನ್ನು ನೋಡುವ ದೃಷ್ಟಿಯೂ ಬದಲಾಗಿತ್ತು.

ತನ್ನಿಷ್ಟದ ಗೆಳೆಯ ಡಾಕ್ಟರ್ ವಾಹೀದ್ ಅವರ ನಿಸ್ವಾರ್ಥ ಸೇವೆಗಾಗಿ ತನ್ನದೂ ಸ್ವಲ್ಪ ಅಳಿಲಸೇವೆ ಇರಲಿ ಎಂದು ಡಾ. ಸ್ವಪ್ನ ಹೆಗ್ಡೆಯು ಪ್ರತೀ ತಿಂಗಳ ಎರಡನೇ ಶನಿವಾರ, ತನ್ನ ಮಕ್ಕಳನ್ನೂ ಬೆಂಗಳೂರಿನ 'ಬಾಲವನ'ದ ಆವರಣಕ್ಕೆ ಕರೆತಂದು, ಅಲ್ಲಿನ ಮಕ್ಕಳ ಆರೋಗ್ಯ ತಪಾಸಣೆ ಮಾಡಿ ಉಚಿತ ಔಷಧವನ್ನು ನೀಡುತ್ತಿರುವುದು–ಬದುಕಿನ ಇಳಿಸಂಜೆಯಲ್ಲಿರುವ